ಮೈಸೂರ ಗಿಜಿಟ.

ಸಂ. XXXI.] ಸರ್ಕಾರದಿಂದ ಘಾಯಿಷ್ ಆದ್ದು [ನಂ. 34.

ಬೆಂಗಳೂರು, ಗುರುವಾರ, ಆಗಸ್ಟ್ ತಾ॥ 27, ಸ್ರ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ರು, ರಜಿಸ್ಟ್ರೇರ್ಷ ವ ಯಡ್ಯುಕೇಷ್ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷ್ಷ ಜಡ್ಜ್‌ರು, ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ರು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥತೀ ರಿಪೋರ್ಟುಗಳು; ಪೋಸ್ಟ್ಆಫಿಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್ಷಗಳು. ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

ಈ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 28ನೇ ಜುಲೈ 1896.

ನಂ. 1453.—ಜು. 148, ಸ್ರ 1894ನೇ ಇಸವಿಯ ಮೈಸೂರ್ ಜೈಲ್ ಮ್ಯಾನ್ಯುಯಲಿನ 24 ವ 37ನೇ ಪುಟಗಳಲ್ಲಿ ಘಾಪಿಸಿರುವ 125 ಮತ್ತು 202ನೇ ರೂಲುಗಳಿಗೆ ಈ ಕೆಳಗೆ ಕಂಡ ಜಾಸ್ತೀ ಅಂಶಗಳು ಶೇರಿಸಲ್ಪಡಬೇಕೆಂದು ಗವರ್ಮೆಂಟಿನವರು ಅಪ್ಪಣೆ ಕೊಡುತ್ತಾರೆ:—

125 A. ಜೈಲಿಗೆ ದಾಖಲ್ಮಾಡಿಕೊಳ್ಳುವದಕ್ಕೆ ತರಲ್ಪಟ್ಟ ಯಾ ಸಾಕ್ಷಿಗಾಗಿ ಕೋರ್ಟಿಗೆ ಕಳುಹಿಸಲ್ಪಟ್ಟು ಮತ್ತು ಅಲ್ಲಿಂದ ಜೈಲಿಗೆ ವಾಪಸು ಬರುವ ಒಬ್ಬ ಸಿವಿಲ್ ಖೈದಿಯು ಅವನು ಹಾಗೆ ತರಲ್ಪಡಬಹುದಾದ ಯಾ ವಾಪಸು ಬರಬಹುದಾದ ಯಾವ ದಿನದಲ್ಲಾಗಲಿ ಮತ್ತು ಯಾವ ಘಂಟೆಯಲ್ಲಾಗಲಿ ಕೆಲಸಕೊಳ್ಳಲ್ಪಡತಕ್ಕದ್ದು.

202 A. ಯಾವ ಖೈದಿಯಾಗಲಿ ಭಾನುವಾರಗಳು, ಕ್ರಿಸ್ತಮಸ್ ದಿನ ಯಾ ಗುಡ್‌ಫ್ರೈಡೆ ಯಾ ಲಾಕಪ್ಪಿನ ಕಾಲ ಮಿಾರಿದ ತರುವಾಯ ಯಾವ ದಿನದಲ್ಲಾಗಲಿ ಜೈಲಿಗೆ ಕೆಲಸಕೊಳ್ಳಲ್ಪಡಕೂಡದು; ಆದರೆ ಜೈಲಿನಿಂದ ದರ್ಖಾಸ್ತ್ ಬಗ್ಗೆ ಯಾ ಸಾಕ್ಷಿಗಳಾಗಿ ಕಳುಹಿಸಲ್ಪಟ್ಟ ಖೈದಿಗಳು ಅವರು ಯಾವ ಕಾಲದಲ್ಲಿ ವಾಪಸು ಬಂದಾಗ್ಯೂ ಮರಳಿ ಕೆಲಸಕೊಳ್ಳಲ್ಪಡತಕ್ಕದ್ದು.

ತಾರೀಖು 7ನೇ ಆಗಸ್ಟ್ 1896.

ನಂ. 1993.—ಮಿ. 328, 1894ನೇ ಇಸವಿ VIIನೇ ಲ್ಯಾಂಡ್ ಅಕ್ವಿಜಿಷ್ಷ ಆಕ್ಟಿನ 6ನೇ ಸೆಕ್ಷನ್ ನಿಯಮಗಳನುಸರಿಸಿ, ಇದರಿಂದ ಪ್ರಕಟ ಪಡಿಸುವದೇನಂದರೆ,—ಈ ಕೆಳಗೆ ನಮೂದು ಮಾಡಿರುವ ಜಮೀನುಗಳು ಸರಕಾರದ ಕೆಲಸಕ್ಕೆ ಅಂದರೆ ಹೆಸರ ಘಟ್ಟದ ವಾಟರ್ ಪ್ರಾಜಕ್ಟಿಗೆ ನೀರು ಮುಳಗಡೆಯಾದ ದಾಸೇನಹಳ್ಳೀ ಗ್ರಾಮವನ್ನು ಹೊಸದಾಗಿ ಕಟ್ಟುವದಕ್ಕಾಗಿ ಬೇಕಾಗಿ ಇರುತ್ತೆ:—

ಡಿಸ್ಟ್ರಿಕ್ಟ್.	ತಾಲ್ಲೂಕು.	ಹೋಬಳಿ.	ಗ್ರಾಮದ.	ಅನುಭವದಾರನ ಹೆಸರು.	ಜಮೀ ತಫ್ಸೀಲ್. ಸರ್ವೆ ನಂ.	ವಿಸ್ತೀರ್ಣ.	ಆಕಾರ.	ಹಕ್ಕು ಬಂದಿ.
ಬೆಂಗಳೂರು	ನೆಲಮಂಗಲ	ಮೈಲನಹಳ್ಳಿ	ಗುಜ್ಜದಹಳ್ಳಿ	ಜಟಂಗೀ ರಾಮ ಮಷ್ಟು ಕುಂಟಪ್ಪನ ಮಗ ರಾಮ	34 ಪೈ	5 19½	5 0 0	ಉತ್ತರಕ್ಕೆ-ಪಳ್ಳದ ಹನುಮಂತಯ್ಯನ ಹೊಲ ದಕ್ಷಿಣಕ್ಕೆ—ಮಾಳಿಗೇ ನರಸಿಂಹನ ಹೊಲ ಪೂರ್ವಕ್ಕೆ-ಹೆಸರುಘಟ್ಟಕ್ಕೆ ಹೋಗತಕ್ಕ ಪೋಣಿ ಪಶ್ಚಿಮಕ್ಕೆ—ಸೂರಪ್ಪನ ಹೊಲ ಸರ್ವೆ ನಂಬರ್ 31
				ಪಳ್ಳದ ಕೆಂಪಯ್ಯನಮಗ ಹನುಮಂತಯ್ಯ	34 ಪೈ	5 19½	5 0 0	ಉತ್ತರಕ್ಕೆ—ತೋಟ ತಿಮ್ಮರಾಯನ ಹೊಲ ದಕ್ಷಿಣಕ್ಕೆ—ಮಾಳಿಗೆ ನರಸಿಂಹನ ಹೊಲ ಪೂರ್ವಕ್ಕೆ—ಹೆಸರುಘಟ್ಟದ ಯಲೆ ಕಟ್ಟು ಪಶ್ಚಿಮಕ್ಕೆ—ಗುಜ್ಜದಹಳ್ಳಿ ಗ್ರಾಮದ ಬಂಜರ್

ತಾರೀಖು 11ನೇ ಆಗಸ್ಟ್ 1896.

ನಂ. 2114.—ಜ. 226, ಸ್ ೧೮೭೭ನೇ ಇಸವಿಯ IIIನೇ ಆಕ್ಟ್‌ದ ಇಂಡಿಯನ್ ರೆಜಿಸ್ಟ್ರೇಷನ್ ಆಕ್ಟಿನ 5ನೇ ಸೆಕ್ಷನ್ ಅನುಸರಿಸಿ, ಮೈಸೂರ್ ಗವರ್ನಮೆಂಟಿನವರು ಅಪ್ಪಣೆ ಕೊಡುವದೇನಂದರೆ,—ಬೆಂಗಳೂರ ತಾಲ್ಲೂಕಿನ ಹಾಲೀ ಸಬ್ ರೆಜಿಸ್ಟ್ರೀ ಆಫಿಸ್ ಎರಡು ಪ್ರತ್ಯೇಕ ಆಫಿಸುಗಳಾಗಿ, ಹೊಂದು ಮುನಿಸಿಪಲ್ ಸರಹದ್ದುಗಳಲ್ಲಿ ಅಧಿಕಾರ ವುಳ್ಳಂಥಾ ಬೆಂಗಳೂರ ಷಹರಿಗೋಸ್ಕರವೂ, ಮತ್ತೊಂದು ಬೆಂಗಳೂರ ಷಹರಿನ ಶಿವಾಯಿ ಬೆಂಗಳೂರ ತಾಲ್ಲೂಕಿಗೋಸ್ಕರವೂ, ಮಾಡಲ್ಪಡತಕ್ಕದ್ದು.

2. ಮೇಲ್ಕಂಡ ವಿಭಾಗುಗಳು 1896ನೇ ಆಗಸ್ಟ್ ಗುರ್ರೀ ಲಾಗಾಯತು ಜಾರೀಗೆ ಬರತಕ್ಕದ್ದು.

ತಾರೀಖು 13ನೇ ಆಗಸ್ಟ್ 1896.

ನಂ. 2205.—ಮಿ. ಫೈ. 48—92, ಇದರಿಂದ ಸಕಲ ಜನರ ತಿಳುವಳಿಕೆ ಬ್ಯೆ ಪ್ರಕಟಿಸುವದೇನಂದರೆ, ಬಂದು ಗವರ್ನಮೆಂಟ್ ಟೆಲಿಗ್ರಾಫ್ (ಪೋಸ್ಟ್ ಮತ್ತು ಟೆಲಿಗ್ರಾಫ್ ಶೇರುವ) ಆಫಿಸ್ ಗುಂಡ್ಲುಪೇಟೆಯಲ್ಲಿ 1896ನೇ ಆಗಸ್ಟ್ ಗುರ್ರೀ ಲಾಗಾಯತು ಸ್ಥಾಪಿಸಲ್ಪಟ್ಟಿರುತ್ತೆ.

ನಂ. 2190.—ಜೋ. ಫಂ. 257—92, ಸ್ ೧೮೯೪ನೇ ಇಸವಿಯ VIIನೇ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ಸೆಕ್ಷನ್ ನಿಯಮಗಳನುಸರಿಸಿ ಪ್ರಸಿದ್ಧಪಡಿಸುವದೇನಂದರೆ, ಇದಕ್ಕೆ ಜಂಟಿಸಿರುವ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ಬೆಂಗಳೂರು ಷಹರಿನಲ್ಲಿ ಫೌಂಟೆಯಾನೆ ಜಲಾಶ್ರಯ ಕಟ್ಟುವ ಬಗ್ಯಾಗಿ ಅವಶ್ಯಕವಾಗಿರುತ್ತೆ.

ಡಿವಿಜ್.	ಸ್ಥಳ.	ಮೂಲಿಕರ ಹೆಸರು.	ಪರಾಗ.	ಏನಗ.	ವಿಸ್ತೀರ್ಣ ಪೂರ್ವ ಪಶ್ಚಿಮ ಅಡಿಗಳು.	ವಿಸ್ತೀರ್ಣ ಉತ್ತರ ದಕ್ಷಿಣ ಅಡಿಗಳು.	ಹಕ್ಕು ಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
IV.	ತಾಲ್ಲೂಕು ಕಛೇರಿ ರಸ್ತೆ.	ಕೋಟೆ ಅಪ್ಪಣ್ಣನವರ ಮಗ ಕೋಟೆ ನರಸಿಂಹಣ್ಣನವರು.	ನಂ. 94ರ ಸ್ವಲ್ಪ ಭಾಗ.	ಖಾಲಿ ಜಮೀನಿನ ಒಂದು ಭಾಗ.	11	6	ಆಯೇ 94ನೇ ನಂಬರ್ ಜಾಗಿ.	ಖಾಲಿ ಬಿದಿ.	ಆಯೇ 94ನೇ ನಂಬರ್ ಮನೆ.	ತಾಲ್ಲೂಕು ಕಛೇರಿ ರಸ್ತೆ.

ತಾರೀಖು 13ನೇ ಆಗಸ್ಟ್ 1896.

ನಂ. 2193.—ಲೋ. ಫಂ. 257—92. ಸನ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನ್ ನಿನ ನಿಯಮಗಳನುಸರಿಸಿ ಪ್ರಸಿದ್ಧಪಡಿಸುವದೇನಂದರೆ, ಇದರಡಿ ಕಂಡ ಜಮೀನುಗಳು ಮತ್ತು ಕಟ್ಟಡ ಸರ್ಕಾರ್ ಕೆಲಸಕ್ಕೆ ಅಂದರೆ ಕೂಣಿಗಲ್ ಮ್ಯುನಿಸಿಪಾಲಿಟಿಯಲ್ಲಿ ಬಂದು ರಸ್ತೆ ವಿಸ್ತಾರಪಡಿಸುವ ಬಗ್ಯಾಗಿ ಅವಶ್ಯಕವಾಗಿರುತವೆ.

ನಂಬರು.	ಪೀಪಿಯು ಹೆಸರು.	ಹೋಲ್ ನಂಬರ್.	ಹಿಡುವಳಿದಾರನ ಹೆಸರು.	ಬೇಕಾಗಿರುವ ವಿಸ್ತೀರ್ಣ, ಅಡಿಗಳು.		ಹದ್ದುಬಸ್ತು.	ಚಕ್ಕುಬಂದಿ.				ಷರಾ.
				ಪೂರ್ವ ಪಶ್ಚಿಮ.	ಉತ್ತರ ದಕ್ಷಿಣ.		ಉತ್ತರ.	ಪೂರ್ವ.	ದಕ್ಷಿಣ.	ಪಶ್ಚಿಮ.	
1	ಮಿಷನರೀಸ್ ಪ್ರೊಪರ್ಟಿ ಟ್ರಸ್ಟೀಸ್ ಪೀಪಿ.	784	ಬಳ್ಳೇ ತಿಮ್ಮಪ್ಪಯ್ಯ.	21	20	ಹಂಚಿನ ಮನೆ ಮಣ್ಣಿನ ಪಡಸಾಲೆಗಳ ಮನೆ (3 ಅಂಕಣಗಳು.)	ಸರ್ಕಾರ್ ರಸ್ತೆ.	ಮನೆಯ ಮಾಲೀಕನವರ ಮನೆ ಮತ್ತು ಜಮೀನ್.	ಮನೆಯ ಮಾಲೀಕನವರ ಹಿತ್ತಲು.	ಸರ್ಕಾರ್ ರಸ್ತೆ.	

ತಾರೀಖು 17ನೇ ಆಗಸ್ಟ್ 1896.

ನಂ. 2336.—ಲೋ. ಫಂ. 372.—92, ಕಾಲಾತೀತದಿಂದ ಮ್ಯುನಿಸಿಪಲ್ ಬೋರ್ಡಿನಲ್ಲಿನ ತಮ್ಮ ಸ್ಥಾನವನ್ನ ಖಾಲಿಮಾಡಿದ ಚಿತ್ರದುರ್ಗದ ಮ್ಯುನಿಸಿಪಾಲಿಟಿಯ ಮೆಂಬರ್ ಮೆಸ್ಸರ್ ಜೆ. ಆರ್ಬುತ್ನಾಟ್, ಬಿ. ಏ., ಯವರು ಪುನಃ ಐದು ವರುಷಗಳ ಕಾಲದ ಪರಿಯಂತ ಸದರೀ ಮ್ಯುನಿಸಿಪಾಲಿಟಿಯ ಮೆಂಬರಾಗಿ ಪುನಶ್ಚ ಪೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 2338.—ಲೋ. ಫಂ. 178.—92, ಮೆಸ್ಸರ್ ಲಕ್ಷ್ಮೀನರಸಪ್ಪನವರು ಕಾನಖಾನಹಳ್ಳಿ ಮ್ಯುನಿಸಿಪಾಲಿಟಿಯ ಮೇಂಬರಾಗಿ ಸದರೀ ಸ್ಥಳವನ್ನು ಬಿಟ್ಟುಹೋದ ಮೆಸ್ಸರ್ ರಾಮಸ್ವಾಮಿಅಯ್ಯನವರ ಸ್ಥಳದಲ್ಲಿ ಪೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 18ನೇ ಆಗಸ್ಟ್ 1896.

ನಂ. 2460.—ಮಿ. 410, ಸಬ್ ಅಸಿಸ್ಟಂಟ್ ಸರ್ಜ್ಜರಾದ ಮೆಸ್ಸರ್ ಸಿ. ಏ. ನಂಜಪ್ಪ, ಎಸ್. ಎಂ. ಪ ಎಸ್., ಯವರು ಮೈಸೂರಲ್ಲಿ ಸಿವಿಲ್ ಸರ್ಜ್ಜರಾಗಿ ಆಕ್ಟ್ ಮಾಡುವ ಮೆಸ್ಸರ್ ಆರುಮ್ಮಗಂ ಮೊದಲಿಯಾರ್ಗೆ ಬದಲಾಗಿ 1896ನೇ ಏಪ್ರಿಲ್ 30ನೇ ಮಕ್ಕಂ ಲಾಗಾಯತು 3ನೇ ಗ್ರೇಡ್ ಅಸಿಸ್ಟೆಂಟ್ ಸರ್ಜ್ಜರಾಗಿ ಸಬ್ ಪ್ರೋಟೆಂ ತರೀಕ್ಕೆ ಆಕ್ಟ್ ಮಾಡುವಂತೆ ಪೊಕರರ್ ಮಾಡಲ್ಪಟ್ಟಿರುತ್ತಾರೆ.

ಸಬ್ ಅಸಿಸ್ಟಂಟ್ ಸರ್ಜ್ಜರಾದ ಮೆಸ್ಸರ್ ಟಿ. ವಿ. ಕುಪ್ಪುಸ್ವಾಮಿ ಮೊದಲಿಯಾರ್, ಎಲ್. ಎಂ. ಪ ಎಸ್., ಯವರು ಮೆಸ್ಸರ್ ಸಿ. ಏ. ನಂಜಪ್ಪನವರು ತಲಬಿಲ್ಲದ ರಜಾದ ಸೀಲಿರುವ ಕಾಲದಲ್ಲಿ 3ನೇ ಗ್ರೇಡ್ ಅಸಿಸ್ಟೆಂಟ್ ಸರ್ಜ್ಜರಾಗಿ ಆಕ್ಟ್ ಮಾಡುವಂತೆ ಪೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 19ನೇ ಆಗಸ್ಟ್ 1896.

ನಂ. 2466.—ಲೋ. ಫಂ. 72.—94, ಇದರಿಂದ ಪ್ರಸಿದ್ಧಪಡಿಸುವದೇನಂದರೆ.—ನಂಜಿನಗೂಡು ರೈಲ್ವೆ ಸ್ಟೇಷನಿನ ಆವರ್ಣದಲ್ಲಿ ಜನಗಳ ಉಪಯೋಗಾರ್ಥ ಒಂದು 3ನೇ ಕ್ಲಾಸಿನ ಮುಸಾಫರ್ ಬಂಗ್ಲೆಯು ಸ್ಥಾಪಿಸಲ್ಪಟ್ಟಿರುತ್ತೆ.

ತಾರೀಖು 20ನೇ ಆಗಸ್ಟ್ 1896.

ನಂ. 2506.—ಲೋ. ಫಂ. 257.—92, ಸನ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಪ್ರಸಿದ್ಧಪಡಿಸುವದೇನಂದರೆ, ಇದರಡಿ ಕಂಡ ಜಮೀನು ಸರ್ಕಾರ್ ಕೆಲಸಕ್ಕೆ ಅಂದರೆ ತರೀಕ್ಕೆರೆ ಮ್ಯುನಿಸಿಪಾಲಿಟಿಯ ಹಿಂದೂ ಸ್ಮಶಾನಕ್ಕೆ ಹೋಗುವ ಬಸ್ಯೆ ಮಾರ್ಗ ಮಾಡುವದಕ್ಕಾಗಿ ಬೇಕಾಗಿರುತ್ತೆ.

ಹೋಬಳಿ	ತರೀಕೆರೆ	ಎಸನನಹಳ್ಳಿ ಮೇಲ್ಭಾಗ	ಹಳ್ಳಿಹಳ್ಳಿಪುರ ಹೆಂಡತಿ ಗುಂಡಮ್ಮಾಳ	ಸರ್ವೆ ನಂಬರ್.	ಜೀಜವರಿ. ಎ. ಗುಂಟೆ.	ಜೀರೀಜು. ರೂ. ಆ. ಪೈ.	ಹದ್ದುಗುಂಟೆ ವಹಿ	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.	ಸ್ಮಶಾನಕ್ಕೆ ಅಪ ಅಪ ರಸ್ತೆ ಮಾಡಬೇಕಾಗಿರುವ ಜಮೀನು.	ಷರಾ.
				11	2	29	8	0	6	ಹಳೆಯೂರ ಬೆಳ್ಳೂರ ಸರ್ವೆ ನಂ. 10	ದಾಸಗಳು ಮೇಯುವ ಬಿಟ್ಟಿರುವ ಬೆಳ್ಳೂರ ಸರ್ವೆ ನಂ 15 ಮತ್ತ ಸರ್ವೆ ನಂ. 8ರ ಭಾಗ	ಈಗ ಬೆಳ್ಳನಾಡ ಕಾಡ ನಂ. 13	ಹಳ್ಳಿಹಳ್ಳಿಪುರ ಹೆಂಡತಿ ಗುಂಡಮ್ಮನ ನಂ. 9	75 ಮೊ. ಆ. 0 ಪೈ. 0	

ತಾರೀಖು 29ನೇ ಜುಲೈ 1896.

ನಂ. 1144.—ರೆ. 427, ಸ್ 1888ನೇ ಇಸವಿಯ IVನೇ ರೆಗ್ಯುಲೇಷನಿಂದ ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷನಿನ 2ನೇ ಪ್ಯಾರಾ ಅನುಸರಿಸಿ ಮೈಸೂರ ಗವರ್ಣಮೆಂಟಿನವರು, ಸದರೀ ಕೋಡಿನ VIII ವ IXನೇ ಅಧ್ಯಾಯಗಳ ನಿಯಮಗಳನ್ನ ನೆಲವಂಗಲ ತಾಲ್ಲೂಕಿನಲ್ಲಿರುವ ಕಾಯಂಗುಂತ್ತಾ ಕುಲಿಪುರ ಗ್ರಾಮಕ್ಕೆ ಲಗಾವ್ ಮಾಡುವ ಬಗ್ಗೆ, ಅಧಿಕಾರ ಕೊಟ್ಟಿರುತ್ತಾರೆ.

ತಾರೀಖು 30ನೇ ಜುಲೈ 1896.

ನಂ. 1173.—ರೆ. ಫೈ. 161.—92, ಮೈಸೂರ್ ಸ್ಟೇಟ್ ಲೈಫ್. ಇನ್‌ಷೂರೆನ್ಸಿಗೆ ಸಂಬಂಧಪಟ್ಟ ರೂಲ್ಸಿನ್‌ಕ್ಲಿ5 ವ 6ನೇ ರೂಲುಗಳಿಗೆ ಈ ಕೆಳಗೆ ಕಂಡದ್ದನ್ನ ಬದಲಾಗಿ ಕೇರಿಸುವದಕ್ಕೆ ಮೈಸೂರ್ ಗವರ್ಣಮೆಂಟಿನವರು ಮಂಜೂರ್ಮಾಡಿರುತ್ತಾರೆ:—

5. "ಇನ್‌ಷೂರೆನ್ಸಿನ ಕೆಲಸಗಳಿಗೋಸ್ಕರ ಗಣಿಸಲ್ಪಡಬೇಕಾಗಿ ಬರುವ ದಿನಕ್ಕೆ ಹಿಂದಿನ ಜನನದಿನವಾಗಲಿ ಯಾ ಮುಂದಿನ "ಜನನ ದಿನವಾಗಲಿ ಯಾವದು ಸಮೀಪವಾಗಿರುತ್ತದೆಯೋ ಅದು ಭೀಮಾದಾರನ ವಯಸ್ಸಾಗಿ ತೆಗದುಕೊಳ್ಳಲ್ಪಡುವದು. ಸದರೀ ದಿನ "ವು ಉಭಯ ಜನನ ಕಾಲಗಳಿಗೆ ಸಮಾಂತರವುಳ್ಳದ್ದಾಗಿರುವ ಪಕ್ಷದಲ್ಲಿ ಅತನ ವಯಸ್ಸು ಹಿಂದಿನ ಜನನ ದಿನದಲ್ಲಿ ಆಗಿರುವ ವಯಸ್ಸಾ "ಗಿ ಯೋಜಿಸಲ್ಪಡುವದು."

6. "ಈ ರೂಲುಗಳು ಜಾರೀಗೆ ಬಂದ ತರುವಾಯ ಮೈಸೂರ್ ಗವರ್ಣಮೆಂಟಿನ ನವ್ಕರಿಗೆ ದಾಖಲಾಗಬಹುದಾದ ವಿಷಿಷ್ಟ "ಜನಗಳ ವಿಷಯದಲ್ಲಿ ಅವರು ಗವರ್ಣಮೆಂಟ್ ನವ್ಕರಿಗೆ ದಾಖಲಾದ ತಾರೀಖಿನಿಂದಲೂ, ಅಥವಾ 21 ವರುಷಗಳ ವಯಸ್ಸಿನ ಮುಂ "ಚೆಯೇ ಗವರ್ಣಮೆಂಟ್ ನವ್ಕರಿಯಲ್ಲಿ ಶೇರಿದಂಥಾವರ ವಿಷಯದಲ್ಲಿ 20 ವರುಷ 6 ತಿಂಗಳುಗಳ ವಯಸ್ಸು ಪೂರೈಸಿದ ತಾರೀಖಿನಿಂ "ದಲೂ ಇನ್‌ಷೂರೆನ್ಸು ಅವಶ್ಯಕವಾಗಿರತಕ್ಕದ್ದು. ಪರಂತು ವಿನಾಯಿಸಲ್ಪಟ್ಟ ಸಂದರ್ಭಗಳಲ್ಲಿ ನಿರ್ಣಯಿಸಲ್ಪಟ್ಟ ಕಾಲಕ್ಕೆ ಮಾತ್ರ "ಕೆಲಸಕ್ಕೆ ಇಡಲ್ಪಟ್ಟಿರುವ ಆಫಿಸರುಗಳು ಅವಶ್ಯಕವಾದ ಇನ್‌ಷೂರೆನ್ಸಿನಿಂದ ವಿನಾಯಿಸಲ್ಪಡಬಹುದು. 45 ವರುಷಗಳ ವಯಸ್ಸು "ಮೀರಿದ ಯಾ 10 ರೂಪಾಯಿಗಳ ತಲಬಿಗೆ ಕೀಳ್ಪಟ್ಟ ಯಾವ ಆಫಿಸರು ಮೊದಲಿನ ಯಾ ಆ ತರುವಾಯದ ಇನ್‌ಷೂರೆನ್ಸಿಗೆ ಅರ್ಹ "ನಾಗಿರುವದಿಲ್ಲ."

ತಾರೀಖು 11ನೇ ಆಗಸ್ಟ್ 1896.

ನಂ. 1502.—ರೆ. 579, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಮೆಸ್ಟರ್ ಎಚ್. ಎಚ್. ಸ್ಪಾರ್ಕ್ಸ್‌ಯವರಿಗೆ, 1896ನೇ ಆಗಸ್ಟ್ 12ನೇ ತಾರೀಖಿನಾರಭ್ಯ ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಸೀನಿಯರ್ ಅಸಿಸ್ಟೆಂಟ್ ಕಮ್ಮಿಷನರ್ ಯವರು, ಸದರೀ ಮೆಸ್ಟರ್ ಸ್ಪಾರ್ಕ್ಸ್ ಯವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ಡಿಸ್ಟ್ರಿಕ್ಟಿನ ಚಾರ್ಜಿನಲ್ಲಿರತಕ್ಕದ್ದು.

ನಂ. 1548.—ಎಕ್ಸೈಸ್. 62, ಸ್ 1893ನೇ ಜನವರಿ 14ನೇ ಮಕ್ತುಂ 11813—ರೆ. ಫೈ. 233–92ನೇ ನಂಬರ್ ಗವರ್ಣಮೆಂಟ್ ಇಸ್ತಿಹಾರ್‌ನಾಮೆಯಲ್ಲಿರುವ Vನೇ ರೂಲಿನ 6ನೇ ಪ್ಯಾರಾ (13)ನೇ ಕ್ಲಾಜಿಗೂ ಮತ್ತು ಸದರೀ ಇಸ್ತಿಹಾರ್‌ನಾಮೆಗೆ ಕೇರಿಸಿರುವ "ಎ" ಲೈಸೆನ್ಸಿನ 4 (4)ನೇ ಷರತ್ತಿಗೂ ಈ ಕೆಳಗೆ ಕಂಡದ್ದನ್ನ ಬದಲಾಗಿ ಕೇರಿಸುವ ಬಗ್ಗೆ ಮೈಸೂರ್ ಗವರ್ಣಮೆಂಟಿನವರು ಅಪ್ಪಣೆ ಕೊಡುತ್ತಾರೆ.

ರೆವಿನ್ಯೂ ಬೋರ್ಡಿನ ಸ್ಟ್ಯಾಂಡಿಂಗ್ ಆರ್ಡರುಗಳ XIನೇ ಅಧ್ಯಾಯದ 170ನೇ ರೂಲಿನ 4ನೇ ಪ್ಯಾರಾವಿಗೆ ಒಳಪಟ್ಟುವುದ ರಾಸ್ ಪೈಸರ್ಡೆಸಿಯಲ್ಲಿರುವ ಬಳ್ಳಾರಿ, ಅನಂತಪುರ, ಕಡಪ ಉತ್ತರ ಆರ್ಕಾಟು, ಶಾಲ್ಯ ಮತ್ತು ಕೊಯಿಮುತ್ತೂರು ಡಿಸ್ಟ್ರಿಕ್ಟುಗಳಿಂದ ಮತ್ತು ಸದರೀ ಡಿಸ್ಟ್ರಿಕ್ಟುಗಳಿಗೆ ಶೇಂದಿಯನ್ನ ಆಮದ್‌ರಫ್ತ್ ಮಾಡುವ ಬಗ್ಗೆ ಬೆಂಗಳೂರು, ಕೋಲಾರ, ತುಮಕೂರು, ಮೈಸೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮ್ಮಿಷನರುಗಳು ಅವರುಗಳ ಯುಕ್ತಾನುಸಾರ ಅಪ್ಪಣೆ ಕೊಡಬಹುದು. ಸದರೀ ಆರ್ಡರಿನ ಯಕ್ಸ್ ಟ್ರಾಕ್ಟ್ ಅಂದರೆ ಭಾಗವು ಇದರ ಬಾಜೂದಲ್ಲಿ ಕಾಣಿಸಿರುತ್ತೆ.

XIನೇ ಅಧ್ಯಾಯ, 170ನೇ ರೂಲ್, 4ನೇ ಪ್ಯಾರಾ "ಬಳ್ಳಾರಿ, ಅನಂತಪುರ, ಕಡಪ, ಉತ್ತರ ಆರ್ಕಾಟು, ಶಾಲ್ಯ ಮತ್ತು ಕೊಯಿಮುತ್ತೂರು ಡಿಸ್ಟ್ರಿಕ್ಟುಗಳ ಕಲೆಕ್ಟರುಗಳು ಮೈಸೂರಿಂದ ಮತ್ತು ಮೈಸೂರಿಗೆ ಶೇಂದಿಯನ್ನ ಆಮದ್‌ರಫ್ತ್ ಮಾಡುವ ಬಗ್ಗೆ ಅಪ್ಪಣೆ ಕೊಡಬಹುದು. ಪರಂತು ಶೇಂದಿಯು ಶೇದಾರಫ್ತ್ ಮಾಡಲ್ಪಡುವ ಇಜಾರೆ ಸ್ಥಳಗಳ ಗುತ್ತಿಗದಾರ್ರಿಗೆ ಮಾತ್ರವೇ ರಹದಾರಿಗಳು ಕೊಡಲ್ಪಡತಕ್ಕದ್ದು."

ತಾರೀಖು 12ನೇ ಆಗಸ್ಟ್ 1896.

ನಂ. 1628.—ರೆ. 622, ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಮೆಸ್ಟರ್ ಏ. ಕೃಷ್ಣಸಾಮಯ್ಯಂಗಾರ್ರಿಗೆ 1896ನೇ ಮಾರ್ಚಿ 11ನೇ ಮಕ್ತುಂ 8249.—ರೆ. 3190ನೇ ನಂಬರ್ ಗವರ್ಣಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಐದು ದಿನಗಳ ಕ್ಯಾಜುಯಲ್ ರಜಾ ಅವರಕೋರಿಕೆಯಂತೆ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 13ನೇ ಆಗಸ್ಟ್ 1896.

ನಂ. 1697.—ರೆ. ಫೈ. 3—96, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಸೆಕ್ಷನ್ ಅನುಸರಿಸಿ, ಕಡೂರ ಡಿಸ್ಟ್ರಿಕ್ಟು ಯಕ್ಸ್‌ಟ್ರಾ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಬಿ. ರಾಮಸ್ವಾಮಯ್ಯಂಗಾರ್ ಯವರಿಗೆ 1896ನೇ ಆಗಸ್ಟ್ 24ನೇ ಮಕ್ತುಂ ಲಾಗಾಯತು ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 14ನೇ ಆಗಸ್ಟ್ 1896.

ನಂ. 1671.—ರೆ. 631, ಜಗಳೂರು ತಾಲ್ಲೂಕಿನ ಅಮಲ್ದಾರ್ ಮಹಾದೇವರಾಯರಿಗೆ 1896ನೇ ಜೂನ್ 25ನೇ ಮಕ್ಕಂ 11216.—ರೆ. 4397ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಪ್ರಿವಿಲೀಜ್ ರಜಾದ ಮೇಲೆ ಅವರಿರುವ ಕಾಲದಲ್ಲಿ ಈ ಕೆಳಗೆ ಕಂಡ ಆಕ್ಟಿಂಗ್ ವೊಕರರಾತಿಗಳು ಹುಕುಂ ಮಾಡಲ್ಪಟ್ಟಿರುತ್ತವೆ:—

1. ಹರಿಹರ ಸಬ್ ತಾಲ್ಲೂಕಿನ ಡಿಪ್ಯೂಟಿ ಅಮಲ್ದಾರ್ ಎಂ. ರಂಗನಾಥರಾಯರು ಜಗಳೂರು ತಾಲ್ಲೂಕಿನ ಅಮಲ್ದಾರ್‌ರಾಗಿ ಆಕ್ಟಿಂಗ್ ತರೀಕ್ ಯಿರತಕ್ಕದ್ದು.

2. ದಾವಣಗೆರೆ ತಾಲ್ಲೂಕಿನ ಪೊಲೀಸ್ ಇನ್ಸ್‌ಪೆಕ್ಟರ್ ವೆಂಕಟರಮಣಯ್ಯನವರು ಹರಿಹರ ಸಬ್ ತಾಲ್ಲೂಕಿನ ಡಿಪ್ಯೂಟಿ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರುಗಿ ಆಕ್ಟಿಂಗ್ ತರೀಕ್ ಯಿರತಕ್ಕದ್ದು.

ನಂ. 1700.—ರೆ. ಫೈ. 4.—96, ಕೃಷ್ಣರಾಜಪೇಟೆ ತಾಲ್ಲೂಕಿನ ಅಮಲ್ದಾರ್ ವೆಂಕಟರಾಯರಿಗೆ 1896ನೇ ಏಪ್ರಿಲ್ 16ನೇ ಮಕ್ಕಂ 9464.—ರೆ. 3650ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಯಿಪ್ಪತ್ತೊಂದು ದಿನಗಳ ಪ್ರಿವಿಲೀಜ್ ರಜಾ 1896ನೇ ಜುಲೈ 14ನೇ ತಾರೀಖು ಲಾಗಾಯತು 23ರ ವರಿಗೆ ಉಭಯ ದಿನಗಳೂ ಕೇರಿ ಉಪಯೋಗಿಸಿಕೊಂಡದರಿಂದ, ಉಪಯೋಗಿಸಿಕೊಳ್ಳದ ರಜಾ ಭಾಗವು ಯಿದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ನಂ. 1718.—ರೆ. ಫೈ. 105.—95, ಮೈಸೂರ್ ಸರ್ವಿಸ್ ರೆಗ್ಯುಲೇಷ್ಯಗಳ 171ನೇ ಆರ್ಟಿಕಲ್ ಅನುಸರಿಸಿ, ತಿಪಟೂರು ತಾಲ್ಲೂಕಿನ ಅಮಲ್ದಾರ್ ಬಿ. ಸೀತಾರಾಮಯ್ಯನವರಿಗೆ ಬಂದು ದಿನದ ಕ್ಯಾಜುಯಲ್ ರಜಾ ಅಂದರೆ, 1896ನೇ ಜುಲೈ 28ನೇ ತಾರೀಖಿನಲ್ಲಿ ಕೊಡಲ್ಪಟ್ಟತ್ತು.

ತಾರೀಖು 15ನೇ ಆಗಸ್ಟ್ 1896.

ನಂ. 1825.—ರೆ. ಫೈ. 387.-92, ಮೂರನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಚಂದ್ರಶೇಖರಅಯ್ಯರ್, ಬಿ. ಏ., ಬಿ. ಎಲ್., ಯವರು, 1896ನೇ ಜುಲೈ 28ನೇ ಮಕ್ಕಂ ಲಾಗಾಯತು ಬಿ. ಷೆಡ್ಯೂಲಿನಲ್ಲಿ ಅಸಿಸ್ಟೆಂಟ್ ಕಮ್ಮಿಷನರುಗಳ 2ನೇ ಕ್ಲಾಸಿಗೆ ಬಡ್ತೀ ಮಾಡಲ್ಪಟ್ಟಿರುತ್ತಾರೆ.

ನಂ. 1832.—ಫಾ. ಫೈ.—91.—95, ಷಿಕಾರಿಪುರದ ಫಾರೆಸ್ಟ್ ಸಬ್ ಡಿವಿಜನಿನ ಫಾರೆಸ್ಟುಗಳ ಅಸಿಸ್ಟೆಂಟ್ ಕ್ಲರ್ಸರ್ವೇಟರ್ ಮೆಸ್ಸರ್ ಬಿ. ಶ್ರೀನಿವಾಸರಾಯರಿಗೆ 1896ನೇ ಜುಲೈ 14ನೇ ಮಕ್ಕಂ 535.—ಫಾ. ಫೈ. 91.—95ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕೊಡಲ್ಪಟ್ಟಿರ್ದ ರಜಾ ಇನ್ನೂ ಎರಡು ತಿಂಗಳ ವರಿವಿಗೆ ಜಾಸ್ತೀ ಮಾಡಲ್ಪಟ್ಟಿರುತ್ತೆ.

2. ಫಾರೆಸ್ಟುಗಳ ಯಕ್ಟ್ಯಾನ್ಸ್ ಅಸಿಸ್ಟೆಂಟ್ ಕ್ಲರ್ಸರ್ವೇಟರ್ ಮೆಸ್ಸರ್ ಮಾಣ್ಟ್ಗೋರೋ ಯವರು ಸದರಿ ಮೆಸ್ಸರ್ ಶ್ರೀನಿವಾಸರಾಯರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಷಿಕಾರಿಪುರದ ಫಾರೆಸ್ಟ್ ಸಬ್ ಡಿವಿಜನಿನ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 17ನೇ ಆಗಸ್ಟ್ 1896.

ನಂ. 1777.—ರೆ. 678, ಚನ್ನಗಿರೀ ತಾಲ್ಲೂಕಿನ ಅಮಲ್ದಾರ್ ಸಿ. ಕೃಷ್ಣರಾಯರಿಗೆ 1896ನೇ ಜೂನ್ 6ನೇ ಮಕ್ಕಂ 10606.—ರೆ. 4181ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಅವರಿಗೆ ಕೊಡಲ್ಪಟ್ಟಿದ್ದ ರಜಾದ ಮೇಲಿರುವ ಕಾಲದಲ್ಲಿ ಸದರೀ ತಾಲ್ಲೂಕಿನ ತಿರಸ್ತೇದಾರ್ ನರಸಿಂಹಲು ನಾಯಿಡುಯವರು ಸದರೀ ತಾಲ್ಲೂಕಿನ ಚಾರ್ಜಿನಲ್ಲಿಯಿದ್ದು ಮತ್ತು ಮೂರನೇ ಕ್ಲಾಸ್ ಮಾಜಿಸ್ಟ್ರೇಟರ ಅಧಿಕಾರಗಳು ಚಲಾಯಿಸತಕ್ಕದ್ದು.

2. ಇದು ಮೇಲೆ ಹೇಳಲ್ಪಟ್ಟಿರುವ ಇಸ್ತಿಹಾರ್‌ನಾಮೆಯಲ್ಲಿ ಹುಕುಂ ಮಾಡಲ್ಪಟ್ಟ ಆಕ್ಟಿಂಗ್ ವೊಕರರಾತಿಯನ್ನ ರದ್ದು ಪಡಿಸುತ್ತೆ.

ನಂ. 1838.—ಫಾ. ಫೈ. 104.-95, ಮೈಸೂರ್ ಸರ್ವಿಸ್ ರೆಗ್ಯುಲೇಷ್ಯಗಳ 172ನೇ ಸೆಕ್ಷನ್ ಅನುಸರಿಸಿ, ಹಾಸನ ಡಿಸ್ಟ್ರಿಕ್ಟು ಫಾರೆಸ್ಟುಗಳ ಡಿಪ್ಯೂಟಿ ಕ್ಲರ್ಸರ್ವೇಟರ್ ಮೆಸ್ಸರ್ ಎಸ್. ಏ. ಬಾಪೂರಾಯರಿಗೆ 1896ನೇ ಆಗಸ್ಟ್ 10ನೇ ತಾರೀಖು ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 1874.—ರೆ. 705, ಮೈಸೂರ್ ಡಿಸ್ಟ್ರಿಕ್ಟು ಮಳವಳ್ಳಿ ತಾಲ್ಲೂಕಿಗೆ ಕೇರಿಸೋಣಾದ ಗ್ರಾಮಗಳನ್ನ ತೋರಿಸುವ ಇದಕ್ಕೆ ಜಂಟಿಸಲ್ಪಟ್ಟ ತಖ್ತೆಯು ಸರ್ವರ ತಿಳುವಳಿಕೆ ಬಗ್ಗೆ ಪಾಯಿಷ್ ಮಾಡಲ್ಪಟ್ಟಿರುತ್ತೆ.

ಮಾಗಣಿ.	ನಂಬರ್.	ಇಟ್ಟುಕೊಳ್ಳುವ ಬಗ್ಗೆ ಉದ್ದೇಸಿಸಿದ ಗ್ರಾಮಗಳ ಹೆಸರುಗಳು.	ನಂಬರ್.	3ನೇ ಕಾಲಮಿನಲ್ಲಿ ನಮೂದ್ಮಾಡಲ್ಪಟ್ಟಿರುವ ಗ್ರಾಮಗಳಿಗೆ ಕೇರಿಸಲ್ಪಡಬೇಕಾದ ಗ್ರಾಮಗಳ ಹೆಸರುಗಳು.	ಷರಾ.
1	2	3	4	5	6
ಮಳವಳ್ಳಿ ..	1	ನೆಟ್ಟಕಲ್ಲು	1	ಕಾಡಂಕನಹಳ್ಳಿ	
ಗೌಡಗೆರೆ ..	2	ಅಂತರವಳ್ಳಿ	2	ಹೊಸಹಳ್ಳಿ	

ನಂ. 1876.—ರೆ. 707, ಮೈಸೂರ್ ಸರ್ವಿಸ್ ರೆಗ್ಯುಲೇಷ್ಣಗಳ 188ನೇ ಸೆಕ್ಷನ್ ಅನುಸರಿಸಿ, ನಾಗಮಂಗಲ ತಾಲ್ಲೂಕು ಅಮಲ್ದಾರ್ ಖಾದರ್‌ಅಲ್ಲಿಯವರಿಗೆ 1896ನೇ ಜುಲೈ 1ನೇ ಮಾರ್ಕ್ಕಂ ಲಾಗಾಯತು 2 ತಿಂಗಳೂ 24 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ. ಹಾಲಿ ಕೊಟ್ಟಿರುವ ರಜಾ ಪೂರೈಸಿದ ತರುವಾಯ ಸದರೀ ಯವರು ಸೆಕ್ಷನ್ ಮೇಲೆ ತಮ್ಮ ಕೆಲದಿಂದ ನಿವೃತ್ತರಾಗತಕ್ಕದ್ದು.

ತಾರೀಖು 19ನೇ ಆಗಸ್ಟ್ 1896.

ನಂ. 1972.—ರೆ. ಫೈ. 104.—95, ಮೈಸೂರ್ ಸರ್ವಿಸ್ ರೆಗ್ಯುಲೇಷ್ಣಗಳ 171ನೇ ಆರ್ಟಿಕಲ್ ಅನುಸರಿಸಿ, ತುಮಕೂರು ತಾಲ್ಲೂಕು ಅಮಲ್ದಾರ್ ಮಹಮ್ಮದ್ ರಜಾಯವರಿಗೆ, 1896ನೇ ಆಗಸ್ಟ್ 15ನೇ ಮಾರ್ಕ್ಕಮಿನಲ್ಲಿ ಒಂದು ದಿನದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ. 1975.—ರೆ. ಫೈ. 14.—96, ಮೈಸೂರ್ ಸರ್ವಿಸ್ ರೆಗ್ಯುಲೇಷ್ಣಗಳ 171ನೇ ಆರ್ಟಿಕಲ್ ಅನುಸರಿಸಿ, ದೊಡ್ಡಬಳ್ಳಾಪುರದ ತಾಲ್ಲೂಕಿನ ಅಮಲ್ದಾರ್ ಎಸ್. ಗೋಪಾಲಯ್ಯಂಗಾರ್ಯರಿಗೆ 1896ನೇ ಆಗಸ್ಟ್ 10ನೇ ತಾರೀಖು ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾಲ್ಲೂಕು ಶಿರಸ್ತೇದಾರ್ರು ಸದರೀ ಅಮಲ್ದಾರ್ರು ರಜಾದಮೇಲಿರುವಲ್ಲಿ ತಾಲ್ಲೂಕಿನ ಚಾಲ್ತೀ ಕೆಲಸಗಳ ಚಾರ್ಜಿನಲ್ಲಿರತಕ್ಕದ್ದು.

ನಂ. 1978.—ರೆ. ಫೈ. 26.—96, ಮೈಸೂರ್ ಸರ್ವಿಸ್ ರೆಗ್ಯುಲೇಷ್ಣಗಳ 172ನೇ ಆರ್ಟಿಕಲ್ ಅನುಸರಿಸಿ, ಹುಳಿಯಾರದ ಸಬ್ ತಾಲ್ಲೂಕಿನ ಡೆಪ್ಯೂಟಿ ಅಮಲ್ದಾರ್ ಬಿ. ಸಿ. ಕೇಶವಯ್ಯನವರಿಗೆ, 1896ನೇ ಆಗಸ್ಟ್ 12ನೇ ಮಾರ್ಕ್ಕಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಒಂದು ವಾರದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಚಿಕ್ಕನಾಯಕನಹಳ್ಳಿ ತಾಲ್ಲೂಕು ಅಮಲ್ದಾರ್ರು, ತಮ್ಮ ಕೆಲಸಗಳೊಂದಿಗೆ ಸದರೀ ಡೆಪ್ಯೂಟಿ ಅಮಲ್ದಾರ್ರು ರಜಾದಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಹುಳಿಯಾರದ ಸಬ್ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ನಂ. 1981.—ರೆ. ಫೈ. 25.—96, ಮೈಸೂರ್ ಸರ್ವಿಸ್ ರೆಗ್ಯುಲೇಷ್ಣಗಳ 171ನೇ ಆರ್ಟಿಕಲ್ ಅನುಸರಿಸಿ, ಜೆಗ್ಗಡದೇವನ ಕೋಟೆ ತಾಲ್ಲೂಕು ಅಮಲ್ದಾರ್ ಕೃಷ್ಣಶೆಟ್ಟಿ ಯವರಿಗೆ, 1896ನೇ ಆಗಸ್ಟ್ 12ನೇ ಮಾರ್ಕ್ಕಂ ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

2. ತಾಲ್ಲೂಕು ಶಿರಸ್ತೇದಾರ್ರು ಸದರೀ ಅಮಲ್ದಾರ್ರು ರಜಾದಮೇಲಿರುವಲ್ಲಿ ತಾಲ್ಲೂಕಿನ ಚಾಲ್ತೀ ಕೆಲಸಗಳ ಚಾರ್ಜಿನಲ್ಲಿರತಕ್ಕದ್ದು.

ನಂ. 1893.—ಫಾ. ಫೈ. 27.—95, ಮೂರನೇ ಕ್ಲಾಸಿನ ಫಾರೆಸ್ಟ್ಗಳ ಅಸಿಸ್ಟೆಂಟ್ ಕಂಸರ್ವೇಟರ್ ಮೆಸ್ಟ್ರ್ ಬಿ. ಶ್ರೀನಿವಾಸರಾಯರಿಗೆ 1896ನೇ ಏಪ್ರಿಲ್ 12ನೇ ಮಾರ್ಕ್ಕಂ ಲಾಗಾಯತು ಕಾಹಿಲೇ ರಜಾ ಕೊಡಲ್ಪಟ್ಟಿರುವದರಿಂದ ಈ ಕೆಳಗೆ ಕಂಡ ಹಂಗಾಮಿ ಬಡ್ತಿಗಳು ಮೇಲೆ ಹೇಳಲ್ಪಟ್ಟ ತಾರೀಖು ಲಾಗಾಯತು ಹುಕುಂ ಮಾಡಲ್ಪಟ್ಟಿರುತವೆ:—

ಯಕ್ಸ್ಟ್ರಾ ಅಸಿಸ್ಟೆಂಟ್ ಕಂಸರ್ವೇಟರ್ ಮೆಸ್ಟ್ರ್ ಜೆ. ಜೆ. ಮಾಣ್ಟೇರೋ ಯವರು 3ನೇ ಕ್ಲಾಸಿನ ಫಾರೆಸ್ಟ್ಗಳ ಅಸಿಸ್ಟೆಂಟ್ ಕಂಸರ್ವೇಟರಾಗಿ ಆಕ್ಟಿಂಗ್ ತರೀಕ್ ಇರತಕ್ಕದ್ದು.

ಎರಡನೇ ಗ್ರೇಡಿನ ರೇಂಜರ್ ಮೆಸ್ಟ್ರ್ ಎಂ. ಶ್ರೀನಿವಾಸರಾಯರು ಯಕ್ಸ್ಟ್ರಾ ಅಸಿಸ್ಟೆಂಟ್ ಕಂಸರ್ವೇಟರಾಗಿ ಆಕ್ಟಿಂಗ್ ತರೀಕ್ ಇರತಕ್ಕದ್ದು.

ಹುಕುಂ ಬಮೋಜೀಬ್,
ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ಮ ರೆವಿನ್ಯೂ
ಇಲಾಖೆಗಳ ಗವರ್ಮೆಂಟ್ ಸೆಕ್ರೆಟರಿ.

ಪಬ್ಲಿಕ್‌ವರ್ಕ್ಸ್.

ಇನ್ಸ್ಪೆಹಾರ್‌ನಾಮಾ.

ತಾರೀಖು 20ನೇ ಆಗಸ್ಟ್ 1896.

ನಂ. 763.–4389, ಸ್ಯಾನಿಟರಿ ಇಂಜಿನಿಯರ ಸರ್ಕಲಿಗೆ ಸೇರಿದ ಅಸಿಸ್ಟೆಂಟ್ ಇಂಜಿನಿಯರ್ ಮೆಸ್ಟ್ರ್ ಟಿ. ವಿ. ನಾರಿಸ್‌ಯವರಿಗೆ 1896ನೇ ಜೂನ್ 22ನೇ ಮಾರ್ಕ್ಕಂ ಲಾಗಾಯತು 51 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 21ನೇ ಆಗಸ್ಟ್ 1896.

ನಂ. 765.—4418, ಹಾಸನ ಡಿವಿಜನಿಗೆ ಸೇರಿದ ಸಬ್ ಅಸಿಸ್ಟೆಂಟ್ ಇಂಜಿನಿಯರ್ ಮೆಸ್ಟ್ರ್ ಕೆ. ಪೊನ್ನಪ್ಪನವರಿಗೆ 1896ನೇ ಜುಲೈ 19ನೇ ಮಾರ್ಕ್ಕಂ ಲಾಗಾಯತು ಇಪ್ಪತ್ತು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,
ಸಿ. ಬರ್ಡ್, ಕರ್ನಲ್,
ಮೈಸೂರ್ ಗವರ್ಮೆಂಟ್ ಪಬ್ಲಿಕ್‌ವರ್ಕ್ಸ್ ಇಲಾಖಾ ಸೆಕ್ರೆಟರಿ.